## ಮೈ ಆ್ಯಕ್ಟಿವಿಟಿ ಪೇಜ್

ಗೂಗ್ಲ್ ನಿಮ್ಮ ಬಗ್ಗೆ ಎಲ್ಲಾ ಮಾಹಿತಿಗಳನ್ನು ಸಂಗ್ರಹಿಸುತ್ತದೆ ಎಂಬುದು ಹಲವರಿಗೆ ಗೊತ್ತಿರಲಿಕ್ಕಿಲ್ಲ. ಆ್ಯಂಡ್ರಾಯ್ಡ್, ಜಿಮೇಲ್, ಡ್ರೈವ್, ಮ್ಯಾಪ್ಸ್, ಯುಟ್ಯೂಬ್.. ಯಾವುದನ್ನೇ ನೀವು ಬಳಸಿ ಆ ಎಲ್ಲಾ ದಾಖಲೆಗಳು ಗೂಗ್ಲ್‌ನಲ್ಲಿ ಸಂಗ್ರಹವಾಗುತ್ತವೆ. ಆದರೆ ಯಾವ ಮಾಹಿತಿ ಸಂಗ್ರಹಿಸಲಾಗಿದೆ ಎಂಬುದನ್ನು ಅರಿಯಲು ಗೂಗ್ಲ್ ಈಗ ಮೈ ಆ್ಯಕ್ಟಿವಿಟಿ ಪೇಜ್ ಎಂಬ ದಾಖಲೆಯನ್ನು ಬಿಡುಗಡೆ ಮಾಡಿದೆ. ಕಳೆದ 2 ದಶಕಗಳಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಕೂಡಾ ಇದು ಒಳಗೊಂಡಿರುತ್ತದೆ. ಅಂದರೆ ನೀವು ಯಾವ ವೆಬ್‌ಸೈಟ್ ಸರ್ಚ್ ಮಾಡಿದ್ದೀರಿ, ಯಾವ ಚಿತ್ರ ನೋಡಿದ್ದೀರಿ ಎಂಬ ಮಾಹಿತಿಗಳೂ ಇದರಲ್ಲಿ ದಾಖಲಾಗುತ್ತವೆ. ಇದಕ್ಕಾಗಿ ಮೈಆ್ಯಕ್ಟಿವಿಟಿ.ಗೂಗ್ಲ್.ಕಾಂ. ಸೈಟ್‌ಗೆ ಭೇಟಿ ನೀಡಬಹುದು.




## ಆ್ಯಂಡ್ರಾಯ್ಡ್ 7.0 ಎನ್



ಆ್ಯಂಡ್ರಾಯ್ಡ್‌ನ ಇತ್ತೀಚಿನ ಈ ಆವೃತ್ತಿ ಬಳಕೆದಾರ ಸ್ನೇಹಿಯಾಗಿದ್ದು, ಇಬ್ಭಾಗವಾದ ಪರದೆ, ಅಪ್‌ಡೇಟ್ ಆದ ಅಂಶಗಳನ್ನು ಒಳಗೊಂಡಿದೆ. ಡೆಸ್ಕ್‌ಟಾಪ್ ಒಎಸ್‌ನಷ್ಟೇ ಸಾಮರ್ಥ್ಯ ಹೊಂದಿದೆ ಎನ್ನಲಾಗಿದೆ. ಹೊಸ ಇಮೋಜಿಗಳಿದ್ದು ಹೆಚ್ಚು ಸರಳವಾಗಿ ಕಾರ್ಯನಿರ್ವಹಣೆ ಮಾಡಬಹುದು. 3ನೇ ಪಾರ್ಟಿ ಆ್ಯಪ್‌ಗಳನ್ನು ಬಳಸಿದರೂ ಕ್ರ್ಯಾಶ್ ಆಗಲಾರದು. ಈ ಆವೃತ್ತಿ ಸದ್ಯ ಪೂರ್ವ ವೀಕ್ಷಣೆಗೆಂದು ಕೆಲವರಿಗೆ ಮಾತ್ರ ಲಭ್ಯವಿದ್ದು, ಬಿಡುಗಡೆ ದಿನಾಂಕವನ್ನು ಇನ್ನೂ ಪ್ರಕಟಿಸಿಲ್ಲ.

## ಪಾಸ್‌ವರ್ಡ್‌ಗೆ ಹೊಸ ವಿಧಾನ

ನಿಮ್ಮ ಗೂಗ್ಲ್ ಖಾತೆಯ ಪಾಸ್‌ವರ್ಡ್ ಬದಲಾಗಿ ಕಣ್ಸನ್ನೆ, ಧ್ವನಿ ಅಥವಾ ಆಲೋಚನೆಗಳನ್ನು ಬಳಸುವಂತಿದ್ದರೆ..! ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದಲ್ಲಿ ಹೀಗೊಂದು ಸಂಶೋಧನೆ ಫಲ ಕಾಣುತ್ತಿದೆ. ಹಣೆಗೆ ಕನೆಕ್ಟರ್ ಕಟ್ಟಿಕೊಂಡು ಇದರಿಂದ ಮೆದುಳಿನ ಸಂಕೇತಗಳು ಸಮೀಪದ ಲ್ಯಾಪ್‌ಟಾಪ್ ಸಂಪರ್ಕಿಸಲು ಇದೀಗ ಸಾಧ್ಯವಾಗುತ್ತಿದೆ. ನಿಮ್ಮಿಷ್ಟಕ್ಕೇ ಹಾಡೊಂದನ್ನು ಗುನುಗಿದರೆ ಕಂಪ್ಯೂಟರ್ ಮೇಲೆ ಸಂಕೇತಗಳ ಸಾಲೇ ಕಾಣಿಸಿಕೊಳ್ಳುತ್ತದೆ. ನಿಮ್ಮ ಐಡಿ ರಕ್ಷಣೆಗೆ ಇದು ಪ್ರಬಲ ವಿಧಾನ ಎಂದೇ ಬಣ್ಣಿಸಲಾಗಿದ್ದು, ಪಾಸ್‌ಥಾಟ್ ಎಂದು ಇದರ ಸಂಶೋಧಕರು ಕರೆದಿದ್ದಾರೆ. ಸೈಬರ್‌ಹ್ಯಾಕ್ ಯುಗದಲ್ಲಿ ಇಂತಹ ಸಂಶೋಧನೆ ಬಳಕೆದಾರರ ಕಣ್ಮಣಿ ಎಂದು ಬಣ್ಣಿಸಲಾಗಿದೆ. ಇದು ಬಳಕೆಗೆ ಅಣಿಯಾಗಲು ಕೆಲ ಸಮಯ ಹಿಡಿಯಬಹುದು ಎಂದು ವಿವಿ ಹೇಳಿದೆ.






## ಪೋಕ್‌ಮನ್ ಗೋ

ನಿಂಟೆಂಡೊ ಬಿಡುಗಡೆ ಮಾಡಿರುವ ಈ ಆ್ಯಂಡ್ರಾಯ್ಡ್ ಹಾಗೂ ಐಒಎಸ್ ಗೇಮ್‌ನಲ್ಲಿ ನೈಜತೆಯನ್ನು ಹೆಚ್ಚಿಸಲಾಗಿದೆ. ಜೊತೆಗೆ ಬಳಕೆದಾರ ತನ್ನ ಸುತ್ತಮುತ್ತಲಿನ ಜಾಗ ಅಥವಾ ಬೇರೆಡೆ ಅಡಗಿಕೊಂಡ ಪುಟ್ಟ ರಾಕ್ಷಸರನ್ನು ಹಿಡಿಯುವ ಆಟವಿದು. ಆದರೆ ಈ ಆ್ಯಪ್‌ನಲ್ಲಿ ಕೆಲವು ಕೊರತೆಗಳಿದ್ದು, ಗೂಗ್ಲ್ ಪ್ಲೇಸ್ಟೋರ್‌ನ ಹೊರಗಡೆ ಡೌನ್‌ಲೋಡ್ ಮಾಡಿಕೊಂಡರೆ ವೈರಸ್ ಅಂಟಿಕೊಳ್ಳುವ ಸಾಧ್ಯತೆ ಇದೆ.

■ ಎಸ್. ತುಂಬೆ